ಮೂರು ವರ್ಷದ ಹಿಂದೆ ನಡೆದ ತಾರಾಳ ಆ ಘಟನೆ ಅದೆಂಥ ಘೋರವಾಗಿತ್ತು. ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸಬೇಕು, ಅಂತಹ ಭಯಾನಕವಾಗಿತ್ತು. ಪ್ರತಿ ದಿನವೂ ಅಲ್ಲಲ್ಲಿ ಭಿಕ್ಷೆ ಬೇಡುತ್ತಾ ತನ್ನ ಜೀವನವನ್ನು ಹೊರೆಯುತ್ತಿದ್ದ ಮಂದಬುದ್ಧಿಯ ಯುವತಿ ತಾರಾ. ಪಕ್ಕದ ಊರಿನ ಅನುಕೂಲಸ್ಥ ಕುಟುಂಬದಲ್ಲಿ ಬೆಳೆದವಳು. ತಾರಾ ಪದವಿ ಓದುತ್ತಿರುವಾಗ ಅವಳ ತಾಯಿ ತೀರಿಕೊಂಡಳು. ಕೆಲವು ದಿನಗಳ ನಂತರ ಅವಳ ಅಪ್ಪ ಇನ್ನೊಂದು ಮದುವೆಯಾಗಿ ಹೆಂಡತಿಯನ್ನು ಕರೆದುಕೊಂಡು ಬಂದ. ಆರಂಭದಲ್ಲಿ ಕೆಲ ದಿನ ಚೆನ್ನಾಗಿಯೇ ಇದ್ದ ಆ ತಾಯಿ, ಮುಂದೆ ಬರಬರುತ್ತಾ ತನ್ನ ಮಲತಾಯಿ ಬುದ್ಧಿಯನ್ನು ತೋರುತ್ತಾ ನಡೆದಳು. ತಾರಾ ಏನೇ ಕೆಲಸ ಮಾಡಿದರೂ ಅದರಲ್ಲಿ ತಪ್ಪು ಹುಡುಕುತ್ತಾ ನಡೆದಾಗ ಅವರಿಬ್ಬರ ನಡುವೆ ಸಣ್ಣಪುಟ್ಟ ಜಗಳ ಶುರುವಾದವು. ಆರಂಭದಲ್ಲಿ ಇದೆಲ್ಲಾ ಸಹಜ ಎಂದು ತಾರಾಳ ತಂದೆ ಉದಾಸೀನ ತೋರಿದರೂ ಮಲತಾಯಿ ಬಿಡಬೇಕಲ್ಲ. ತಾರಾಳ ಬಗ್ಗೆ ಇಲ್ಲಸಲ್ಲದ ಚಾಡಿ ಹೇಳಿ ಅವಳ ತಂದೆಗೆ ಕೋಪ ಬರುವಂತೆ ಮಾಡಿದಳು.



ಒಂದು ದಿನ ತಾರಾಳ ಮೇಲೆ ಕಳುವಿನ ಆರೋಪ ಮಾಡಿ ಅವಳ ತಂದೆ ಹೊಡೆಯುವಂತೆ ಮಾಡಿದಳು. ಕೋಪದಲ್ಲಿ ಆತ ಅವಳನ್ನು ನೂಕಿದಾಗ ಗೋಡೆಗೆ ತಲೆ ಬಡಿದ ತಾರಾ ಪ್ರಜ್ಞೆ ತಪ್ಪಿ ಬಿದ್ದಳು. ನಂತರ ಎಚ್ಚರರಾದ ಅವಳು ಮತಿಭ್ರಮಣೆಗೆ ಒಳಗಾಗಿದ್ದಳು. ದಿನನಿತ್ಯದ ಜೀವನದಲ್ಲಿ ಅವಳು ಮೊದಲಿನಂತೆ ಇರದೆ ಅನ್ಯಮನಸ್ಕಳಾಗಿ ಕೆಲವೊಮ್ಮೆ ತನ್ನಷ್ಟಕ್ಕೆ ತಾನೇ ಮಾತನಾಡತೊಡಗಿದಳು. ಬುದ್ಧಿವಂತೆ ಮತ್ತು ರೂಪವತಿಯಾಗಿದ್ದ ಒಬ್ಬ ಮಗಳಿಗೆ ಅದೆಂಥ ಸ್ಥಿತಿ ತಂದುಬಿಟ್ಟೆನಲ್ಲ ಎಂದು ಅವಳ ತಂದೆ ಪಶ್ಚಾತ್ತಾಪಪಟ್ಟು ಹಾಸಿಗೆ ಹಿಡಿದವರು ಮೇಲೇಳಲಿಲ್ಲ. ಅವಳ ಮಲತಾಯಿಗೆ ಅಷ್ಟೇ ಸಾಕಾಗಿತ್ತು. ಹುಚ್ಚಿ ಪಟ್ಟ ಕಟ್ಟಿ ತಾರಾಳನ್ನು ಮನೆಯಿಂದ ಹೊರಗೆ ಹಾಕಿದಾಗ ಅವಳು ಬಂದು ಸೇರಿದ್ದು ನನ್ನ ಪ್ರತಿಮೆಯ ಎದುರುಗಡೆ ರಸ್ತೆಯಾಚೆಯಿರುವ ಬಸ್ ಶೆಲ್ಟರ್‌ಅನ್ನು.

ಒಂದೆರೆಡು ದಿನ ಅವಳು ಅಲ್ಲಿಯೇ ಮಲಗುವುದು, ಬೆಳಗಾದರೆ ಎದ್ದು ಏನೋ ಧ್ಯಾನ ಮಾಡುವಂತೆ ಕುಳಿತು ಬಿಡುವುದು, ಮತ್ತೊಮ್ಮೆ ಪಕ್ಕದಲ್ಲಿನ ಬೋರ್‌ವೆಲ್ಲಿನ ನಳದಲ್ಲಿ ನೀರು ಕುಡಿದು ನಂತರ ತಲೆ ಮೇಲೆ ಸುರಿದುಕೊಳ್ಳುವುದು ಮಾಡುತ್ತಿದ್ದಳು. ಮತ್ತೇ ಕೆಲವೊಮ್ಮೆ ಏನೋ ಗುನುಗುನಿಸುತ್ತಾ ಕೈಯಲ್ಲಿ ಮೈಕ್ ಹಿಡಿದುಕೊಂಡಂತೆ ಹಾಡುತ್ತಿದ್ದಳು. ಹಗಲು ಇದೇ ರೀತಿ ಕಳೆದ ಅವಳು ರಾತ್ರಿಯಾದಾಗ ಯಾರೋ ಒಗೆದು ಹೋಗಿದ್ದ ತಟ್ಟಿನ ಚೀಲವನ್ನು ಹಾಸಿ ಮಲಗುತ್ತಿದ್ದಳು. ಈ ರೀತಿ ಕಳೆದ ಅವಳಿಗೆ ಹೊಟ್ಟೆಯ ನೆನಪಾದದ್ದು ಎರಡು ದಿನಗಳ ನಂತರವೇ. ಅದನ್ನು ತುಂಬಿಸಿಕೊಳ್ಳಲು ಅವಳು ದಾರಿಯಲ್ಲಿ ಹೋಗುವವರನ್ನು, ಬರುವವರನ್ನು ಕಾಡುತ್ತಾ ಬೇಡುತ್ತಾ ಅವರು ಕೊಟ್ಟಿದ್ದನ್ನು ತಿನ್ನುತ್ತಾ ದಿನ ಕಳೆಯತೊಡಗಿದಳು. ಕೆಲವೊಮ್ಮೆ ಪುಂಡ ಯುವಕರು ಏನೋ ಕೊಡುವ ನೆಪದಲ್ಲಿ ಅವಳನ್ನು ಮುಟ್ಟುವುದು, ಚುಡಾಯಿಸುವುದು ಮಾಡುತ್ತಿದ್ದರೆ ನನಗೆ ಅವರನ್ನು ಅಲ್ಲಿಯೇ ಸುಟ್ಟು ಹಾಕಲೆ ಎಂಬಂಥ ಕೋಪ. ಆದರೇನು ಅದು ಸಾಧ್ಯವಿರಲಿಲ್ಲ. ಅವರೇನು ಮಾಡುತ್ತಿದ್ದರೂ ಅವರು ಕೊಡುವ ಆಹಾರಕ್ಕಾಗಿ ಸುಮ್ಮನಿರುತ್ತಿದ್ದಳು. ಜೊತೆಗೆ ಅದನ್ನೆಲ್ಲಾ ಅರಿಯುವ ಬುದ್ಧಿ ಅವಳದಾಗಿರಲಿಲ್ಲ.

ಹೀಗೆ ಹಲವು ತಿಂಗಳು ಕಳೆದು ಹೋದವು. ಆ ಒಂದು ಕರಾಳ ದಿನ ಅವಳ ಬಾಳಲ್ಲಿ ಬಂದಿತು. ಆ ದಿನ ಸಂಜೆ ಮುಗಿಲು ತುಂಬಾ ಕಾರ್ಮೋಡ ತುಂಬಿಕೊಂಡು ಇನ್ನಿಲ್ಲದಂತೆ ಮಳೆ ಸುರಿಯತೊಡಗಿತು. ಕತ್ತಲು ಆವರಿಸಲು ಶುರುವಾಗಿತ್ತು. ಎಲ್ಲೋ ಹೋಗಿದ್ದ ತಾರಾ ನೆನೆಯುತ್ತ ಆ ಶೆಲ್ಟರ್‌ಗೆ ಬಂದಳು. ಮಳೆ, ಚಳಿಯಿಂದ ಅಲ್ಲಿಯೇ ಸಿಕ್ಕ ಪ್ಲಾಸ್ಟಿಕ್ ಹಾಳೆಯನ್ನು ಹೊದ್ದುಕೊಂಡು ಕೂತಿದ್ದಳು. ಚಿಕ್ಕ ಹಾಳೆಯಾಗಿದ್ದರಿಂದ ಒಂದು ಕಡೆ